**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 08-08-2023.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿಯ ಪರ ವಕೀಲರಿಂದ :**

**1)** ನಮ್ಮ ತಾತ ಚಿಕ್ಕಪಿಳ್ಳಯ್ಯ ಮತ್ತು ಅವರ ಸಹೋದರರು ಮತ್ತು ತಂದೆಯ ಮಧ್ಯೆ ಆದ ವಿಭಾಗ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ನಾನು ನೋಡಿರುವುದಿಲ್ಲ. ವಾದಪತ್ರ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ಆ ವಿಚಾರ ಹೇಳಿರುತ್ತೇನೆ. ವಾದ ಪತ್ರವನ್ನು ತಯಾರಿಸಲು ವಾದಿ ಮತ್ತು ನಾನು ಸೇರಿ ಮಾಹಿತಿ ನೀಡಿರುತ್ತೇವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಾದಿ ಮಾಹಿತಿ ನೀಡಿರುತ್ತಾರೆ. ವಾದ ಪತ್ರ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಓದಿ ತಿಳಿದುಕೊಂಡಿರುತ್ತೇನೆ. ವಾದ ಪತ್ರವನ್ನು ನೋಡಿ ಆ ಬಗ್ಗೆ ಎಲ್ಲಿ ಬರೆದಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಚಿಕ್ಕ ಪಿಳ್ಳಯ್ಯ, ಅವರ ತಂದೆ ಮತ್ತು ಅವರ ಸಹೊದರನ ಮಧ್ಯೆ ಯಾವುದೇ ವಿಭಾಗ ಆಗಿರುವುದಿಲ್ಲ ಹಾಗೂ ಅವರಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಚಿಕ್ಕಪಿಳ್ಳಯ್ಯ ಅವರ ತಂದೆ ಕಾಟಪ್ಪ ಎಂದರೆ ಸರಿ. ಕಾಟಪ್ಪ ಅವರ ಹೆಸರಿನಲ್ಲಿ ಆಸ್ತಿ ಇರುವ ಕುರಿತು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಆ ಬಗ್ಗೆ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಕಾಟಪ್ಪ ಅವರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿ ದಿ.29-03-1949 ರಲ್ಲಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ಅವರ ಜನನ ದಿನಾಂಕ ನನಗೆ ನೆನಪಿಲ್ಲ. ನಾನು ಅವರ ಜನನ ದಿನಾಂಕಕ್ಕೆ ಸಂಬಂಧಿಸಿದ ದಾಖಲಾತಿಯನ್ನು ನೋಡಿರುವುದಿಲ್ಲ. ಅವರು ಯಾವಾಗ ಜನಿಸಿದರು ಎಂದು ವಾದಿಯ ಕಡೆಯಿಂದ ತಿಳಿದುಕೊಂಡಿರುವುದಿಲ್ಲ. ಅವರು ಯಾವಾಗ ಜನಿಸಿದರು ಎಂದು ನನಗೆ ಮಾಹಿತಿ ಇಲ್ಲ. ವಾದಿ 1 ನೇ ಪ್ರತಿವಾದಿಯ ನಂತರ ಚಿಕ್ಕಪಿಳ್ಳಯ್ಯ ಅವರಿಗೆ ಜನಿಸಿರುತ್ತಾರೆ. ವಾದಿಗೆ ಅವರ ಜನನ

ದಿನಾಂಕ ನೆನಪಿಲ್ಲ, ಆದರೆ 1954 ರ ನಂತರ ಜನಿಸಿರುತ್ತೇನೆ ಎಂದು ಹೇಳಿರುತ್ತಾರೆ. 1 ನೇ ಪ್ರತಿವಾದಿಯ ಜನನದ ನಂತರ ಎಷ್ಟು ವರ್ಷದ ನಂತರ ವಾದಿ ಜನಿಸಿರುತ್ತಾರೆ ಎಂದು ನಾನು ವಾದಿಯನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ವಾದಿಯ ಜನನಕ್ಕೆ ಸಂಬಂಧಿಸಿದಂತೆ ಜನನ ಪ್ರಮಾಣ ಪತ್ರ ಅಥವಾ ಶಾಲಾ ದಾಖಲಾತಿ ಇರುವುದಿಲ್ಲ. ವಾದಿಯ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ವಿವಾಹ ಆಮಂತ್ರಣ ಪತ್ರಿಕೆ ಇದ್ದು ಅದನ್ನು ಹಾಜರುಪಡಿಸುತ್ತೇನೆ. ವಾದಿಗೆ ವಿವಾಹವಾದಾಗ ಅವರಿಗೆ ಎಷ್ಟು ವಯಸ್ಸು ಆಗಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಮ್ಮ ತಾಯಿ ವಿವಾಹವಾಗುವ ಪೂರ್ವದಲ್ಲಿ ಚಿಕ್ಕಪಿಳ್ಳಯ್ಯ ಅವರ ಕುಟುಂಬದಲ್ಲಿ ರಾಗಿ ಬೆಳೆದು ಹಾಗೂ ಕೂಲಿ ಮಾಡಿ ಆದಾಯ ಗಳಿಸುತ್ತಿದ್ದರು. ಆ ಸಮಯದಲ್ಲಿ ವಾದಿ ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಸರ್ವೆ ಸಂಖ್ಯೆ 49 ರಲ್ಲಿ ರಾಗಿ ಬೆಳೆಯುತ್ತಿದ್ದರು. ಎಷ್ಟು ಬೆಳೆ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಬರುತ್ತಿದ್ದ ಆದಾಯ ಸಂಸಾರ ನಿರ್ವಹಣೆಗೆ ಸಾಕಾಗುತ್ತಿತ್ತು. ಚಿಕ್ಕಪಿಳ್ಳಯ್ಯ ಅವರು ಉಳಿಸಿದ ಹಣದಲ್ಲಿ ವಾದಿ ಮತ್ತು 5 ಮತ್ತು 6 ನೇ ಪ್ರತಿವಾದಿಗಳ ಮದುವೆ ಮಾಡಿ ಕೊಟ್ಟಿದ್ದಾರೆ ಎಂದರೆ ಸ್ವಲ್ಪ ಖರ್ಚಿನಲ್ಲಿ ದೇವಸ್ಥಾನದಲ್ಲಿ ಮಾಡಿಕೊಟ್ಟಿರುತ್ತಾರೆ. ವಾದಿಯ ಮದುವೆಯಾಗುವ ಪೂರ್ವದಲ್ಲಿ ಚಿಕ್ಕಪಿಳ್ಳಯ್ಯ ಅವರ ಕುಟುಂಬದಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಿಕ್ಕಪಿಳ್ಳಯ್ಯ ಅವರ ಕುಟುಂಬದಲ್ಲಿ ಆಸ್ತಿ ಇತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ದಾಖಲೆಗಳನ್ನು ಪರಿಶೀಲಿಸಿ ಆ ಸಮಯದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳು ದಾವೆ ದಾಖಲಿಸುವ ಸಂದರ್ಭದ್ದು ಆಗಿರುತ್ತದೆ. ವಾದಿ ವಿವಾಹವಾಗುವ ಪೂರ್ವದಲ್ಲಿ ಚಿಕ್ಕಪಿಳ್ಳಯ್ಯ ಅವರ ಹೆಸರಿನಲ್ಲಿರುವ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾಖಲಾತಿಗಳು ಪಹಣಿ ಪತ್ರಿಕೆಗಳಾಗಿರುತ್ತವೆ. ಸದರಿ ದಾಖಲಾತಿ ಇದ್ದರೆ ಅದನ್ನು ನಾನು ಹಾಜರುಪಡಿಸುತ್ತೇನೆ. ನಮ್ಮ ತಾಯಿ ಮದುವೆಯಾದ ನಂತರ ಮಕ್ಕಳ

ಜೊತೆಯಲ್ಲಿ ಗಂಡನ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ನಾನು ನಮ್ಮ ತಾಯಿಯ ಮೊದಲನೇ ಮಗ. ನಮ್ಮ ತಾಯಿಗೆ ಮದುವೆಯಾದ 20-25 ವರ್ಷ ಮಕ್ಕಳು ಇರಲಿಲ್ಲ ಎದರೆ 10-15 ವರ್ಷ ಮಕ್ಕಳು ಇರಲಿಲ್ಲ ಎಂದು ನುಡಿಯುತ್ತೇನೆ. ನಮ್ಮ ತಾಯಿ ಮದುವೆಯಾದ ನಂತರ ಚಿಕ್ಕಪಿಳ್ಳಯ್ಯ ಅವರ ಕುಟುಂಬಕ್ಕೆ ಯಾವುದೇ ಸಹಾಯ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ತಾಯಿ ಮದುವೆಯಾದ ನಂತರ ಚಿಕ್ಕಪಿಳ್ಳಯ್ಯ ಕುಟುಂಬದಲ್ಲಿ ಇದ್ದ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಚಿಕ್ಕಪಿಳ್ಳಯ್ಯ ಅವರಿಗೆ ಪಿತ್ರಾರ್ಜಿತವಾಗಿ ಮತ್ತು ಮಂಜೂರಾತಿ ಮೂಲಕ ಬಂದಿರುತ್ತದೆ. 1 ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಿರುತ್ತವೆ.

**2)** ಚಿಕ್ಕಪಿಳ್ಳಯ್ಯ ಅವರಿಗೆ ಪಿತ್ರಾರ್ಜಿತವಾಗಿ ಬಂದ ವಿಚಾರವನ್ನು ವಾದ ಪತ್ರ ಅಥವಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇತ್ತೀಚಿನ ಕಂದಾಯ ದಾಖಲಾತಿಗಳನ್ನು ಬಿಟ್ಟರೆ ಆ ಬಗ್ಗೆ ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಯಾವ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುತ್ತದೆ ಹಾಗೂ ಯಾವ ಆಸ್ತಿ ಮಂಜೂರಾತಿ ಮೂಲಕ ಬಂದಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಸದರಿ ಮಂಜೂರಾತಿ ಆದೇಶ ಯಾವಾಗ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ಮಂಜೂರಾತಿ ಆದೇಶಗಳು ನಮ್ಮ ತಾಯಿಯ ಮದುವೆಯಾದ ನಂತರ ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಮಂಜೂರಾತಿ ಆದೇಶಗಳನ್ನು ನಾನು ನೋಡಿರುವುದಿಲ್ಲ. ದಾವಾ ಐಟಂ ಸಂಖ್ಯೆ 1 ರಿಂದ 3 ಮತ್ತು 12 ಚಿಕ್ಕಪಿಳ್ಳಯ್ಯ ಅವರಿಗೆ ವೈಯುಕ್ತಿಕವಾಗಿ ಮಂಜೂರಾತಿ ಆದ ಸ್ವತ್ತುಗಳು ಎಂದರೆ ಸರಿಯಲ್ಲ. ನಾನು ಈಗ ದಾವಾ ಐಟಂ ಸಂಖ್ಯೆ 1 ರಿಂದ 3 ಮತ್ತು 12 ರ ಮಂಜೂರಾತಿ ಆದೇಶದ ಮೂರು ಪುಟಗಳ ದೃಢೀಕೃತ ನಕಲನ್ನು ನೋಡಿ ಒಪ್ಪಿಕೊಂಡು ಅದನ್ನು - **ನಿ.ಡಿ.1** ಎಂದು ಗುರುತಿಸಲಾಯಿತು. ಸದರಿ ಆದೇಶದ ನಂತರ ಚಿಕ್ಕಪಿಳ್ಳಯ್ಯ ಅವರು ಸರ್ಕಾರಕ್ಕೆ ಎಷ್ಟು ಹಣ ಪಾವತಿಸಿರುತ್ತಾರೆ

ಎಂದು ನನಗೆ ಗೊತ್ತಿಲ್ಲ. ನಿ.ಡಿ.1 ರಲ್ಲಿ ಚಿಕ್ಕಪಿಳ್ಳಯ್ಯ ಅವರ ಕುಟುಂಬ ಎನ್ನುವ ಬಗ್ಗೆ ನಮೂದು ಮಾಡಿರುವುದಿಲ್ಲ. ಚಿಕ್ಕಪಿಳ್ಳಯ್ಯ ಅವರು ಎಷ್ಟು ಹಣ ಪಾವತಿಸಿರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಿ.ಡಿ.1 ರ ಆಧಾರದ ಮೇಲೆ ಚಿಕ್ಕಪಿಳ್ಳಯ್ಯ ಅವರು ಸದರಿ ಸ್ವತ್ತುಗಳ ಮಾಲೀಕರಾದರು ಎಂದರೆ ಸರಿ.

ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd./-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**